ಹೋಗಲು ಕಾರಣ ಎನ್ನುವುದಕ್ಕೆ ಮದ್ದೂರು ಮತ್ತು ನನ್ನ ಕ್ಷೇತ್ರದ ಮಧ್ಯದಲ್ಲಿ ಶಿಂಷಾ ನದಿ ಹರಿಯುತ್ತದೆ. ಇವರು ಕೆಲವು ನಿಬಂಧನೆಗಳನ್ನು ಹಾಕಿ ಮರಳನ್ನು ಎತ್ತಲು ಅವಕಾಶ ಕೊಟ್ಟಿದ್ದಾರೆ ಅಲ್ಲಿ. ನನ್ನ ಪ್ರಕಾರ, ಮೊದಲನೆಯದಾಗಿ ಅದೊಂದು ದೊಡ್ಡ ಅಪರಾಧ. ಇವರು ಮರಳನ್ನು ತೆಗೆಯಲು ಪರ್ಮಿಷನ್ ಕೊಡಬಾರದಿತ್ತು. ಎಷ್ಟು ಕೋಟಿ ರೂಪಾಯಿ ಅದರಿಂದ ಇಲಾಖೆಗೆ ಆದಾಯ ಬರುತ್ತದೆ ಎಂಬುದು ನನಗೆ ಗೊತ್ತಿಲ್ಲ. ಎಷ್ಟೇ ಕೋಟಿ ರೂಪಾಯಿ ಬಂದರೂ ಕೂಡ ನಾನು ಸರ್ಕಾರಕ್ಕೆ ಅನನ್ಯವಾಗಿ ಪ್ರಾರ್ಥಿಸುತ್ತೇನೆ. ಈ ಕಾರ್ಯಕ್ರಮವನ್ನು ನಿಲ್ಲಿಸಬೇಡಿ. ಎರಡನೆಯದಾಗಿ, ನಿಬಂಧನೆ ಪ್ರಕಾರ ಅಲ್ಲಿ ಮರಳು ಎತ್ತುವುದಕ್ಕೆ ಆದೇಶ ಮಾಡಿಲ್ಲ. ಅನೇಕ ಕಾರಣಕ್ಕಾಗಿ ಸನ್ಮಾನ್ಯ ಮುಖ್ಯ ಮಂತ್ರಿಗಳು ಒಂದು ಸಾರಿ ಅಸಕ್ತಿ ವಹಿಸಿ ನಿಲ್ಲಿಸಿದರು. ನಾನು ದಿನನಿತ್ಯ ಕೂಗಾಡುವುದಾಗಿದೆ. ಆದರೂ ಕೂಡ ಮರಳನ್ನು ಎತ್ತುವುದರಿಂದ ನೀರು ಹರಿಯುವಾಗ ಆಳಕ್ಕೆ ಹೋಗದೆ ಅಂತರ್ಜಲ ಬತ್ತಿ ಹೋಗುತ್ತಿರುವುದು ಅನೇಕ ಕಡೆ ಆಗುತ್ತಿದೆ. ದಯವಿಟ್ಟು ಅದನ್ನು ನಿಲ್ಲಿಸುತ್ತಾರಾ? ಮೊದಲು ನನ್ನ ಕ್ಷೇತ್ರಕ್ಕೆ ಸಂಬಂಧಪಟ್ಟಂತೆ ನಿಲ್ಲಿಸುತ್ತಾರಾ? ಬೇರೆ ಕಡೆಯೂ ಕ್ರಮ ತೆಗೆದುಕೊಳ್ಳುತ್ತಾರಾ? ಇದರ ಬಗ್ಗೆ ಚರ್ಚೆ ಮಾಡಲು ಯಾವಾಗಾದರೂ ಅರ್ಧ ಗಂಟೆ ಚರ್ಚೆಗೆ ಅವಕಾಶ ಕೊಡಿ.

ಅಧ್ಯಕ್ಷರು : ನೀವು ರೂಲ್ 69ರ ಪ್ರಕಾರ ನೋಟೀಸ್ ಕೊಡಿ. ಐ.ವಿಲ್ ಅಡ್ಮಿಟ್ ಇಟ್.

ಶ್ರೀ ಬಿ. ಷೋಮಶೇಖರ್ : ಮಾನ್ಯ ರಾಮಯ್ಯನವರ ಮಾತಿಗೆ ನಾನು ಸಹ ಧ್ವನಿಗೂಡಿಸುತ್ತಿದ್ದೇನೆ. ಇದು ಬಹಳ ಸೂಕ್ಷ್ಮವಾದ ವಿಚಾರ. ಇದು ದೀರ್ಘವಾಗಿ ಚರ್ಚೆಯಾಗಬೇಕಾಗಿದೆ. ನಾವು ಅರ್ಧ ಗಂಟೆ ಚರ್ಚೆಗೆ ಹಾಕಿಕೊಂಡರೆ ನಾವು ಮಾತನಾಡಬಹುದು.

ಅಧ್ಯಕ್ಷರು : ಆಗಬಹುದು. ಈಟೀಸ್ ಅಗ್ರೀಡ್.

ಶ್ರೀ ವೈ.ಕೆ. ರಾಮಯ್ಯ : ನನ್ನ ಕ್ಷೇತ್ರದಲ್ಲಾದರೂ ನಿಲ್ಲಿಸುತ್ತಾರಾ ಎಂಬುದನ್ನು ಮಂತ್ರಿಗಳು ಹೇಳಲಿ. ಪ್ರತಿದಿನ ಕೂಗಾಡಿ ಸಾಕಾಗಿ ಹೋಗಿದೆ. ಮುಖ್ಯಮಂತ್ರಿಗಳು ಹೇಳಿದ ಮೇಲೆ ಮದ್ದೂರು ಕಡೆಗೆ ನಿಲ್ಲಿಸಿದ್ದಾರೆ. ನಮ್ಮ ಮಾತನ್ನು ಮಂತ್ರಿಗಳು ಕೇಳುತ್ತಿಲ್ಲ. ನನ್ನ ಕ್ಷೇತ್ರದಲ್ಲಿ ಮರಳು ತೆಗೆಯುವುದನ್ನು ನಿಲ್ಲಿಸುತ್ತಾರಾ, ಹೇಗೆ ಎಂದು ಅಫಿಷಿಯಲ್ ಕೊಡಬೇಕು. ನಮ್ಮ ಕಡೆ ಮರಳನ್ನು ಶಿಂಷಾ ನದಿಯಿಂದ ತೆಗೆಯುವುದನ್ನು ನಿಲ್ಲಿಸುತ್ತೀರಾ ಆ ಬಗ್ಗೆ ನಾನು ತಮಗೆ ಕಾಗದ ಬರೆದಿದ್ದೇನೆ. ಆದರೂ ಏನೂ ಪ್ರಯೋಜನವಾಗಲಿಲ್ಲ.

ಶ್ರೀ ವಿ. ಮುನಿಯಪ್ಪ : ಮರಳನ್ನು ತೆಗೆಯುವ ವಿಚಾರದ ಬಗ್ಗೆ ಅರ್ಧ ಗಂಟೆ ಚರ್ಚೆಗೆ ಅನುವು ಮಾಡಿಕೊಡುತ್ತೇನೆಂದು ಅಧ್ಯಕ್ಷರು ಹೇಳಿದ್ದೀರಿ. ಖಂಡಿತ ಆ ಸಂದರ್ಭದಲ್ಲಿ ಎಲ್ಲಾ ವಿಚಾರಗಳನ್ನು ಚರ್ಚೆ ಮಾಡೋಣ.

ಪಶು ಆಸ್ಪತ್ರೆಯನ್ನು ಮೇಲ್ದರ್ಜೆಗೇರಿಸುವುದು

546 (4926) : ಶ್ರೀ ಶಿವಶಂಕರ ರೆಡ್ಡಿ ಎನ್.ಹೆಚ್. (ಗೌರಿಬಿದನೂರು) ಮಾನ್ಯ ಪಶು ಸಂಗೋಪನೆ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕಳೆದ ಮೂರು ವರ್ಷಗಳಿಂದ ಸುಮಾರು 600 ಕ್ಕೂ ಹೆಚ್ಚು ಪಶುವೈದ್ಯ ಶಾಲೆಗಳನ್ನು ಉನ್ನತೀಕರಿಸಿರುವುದು ನಿಜವಲ್ಲವೇ; ಹಾಗಿದ್ದಲ್ಲಿ, ಸುಮಾರು 1000 ಹುದ್ದೆಗಳು ಖಾಲಿ ಇರುವುದನ್ನು ಭರ್ತಿ ಮಾಡಲು ಕೈಗೊಳ್ಳುವ ಕ್ರಮವೇನು;

ಆ) ಈ ಕೊರತೆಯಿಂದ ಗ್ರಾಮಾಂತರ ಪ್ರದೇಶ ರೈತರಿಗೆ ಪಶುವೈದ್ಯಕೀಯ ಸೌಲಭ್ಯ ದೊರೆಯುವಲ್ಲಿ ಲೋಪವಾಗಿಲ್ಲವೇ;

ಇ) ಬರಗಾಲದ ಹಿನ್ನೆಲೆಯಲ್ಲಿ ಪಶುಗಳಿಗೆ ತಪಾಸಣಾ ಮಾಡುವ ವೆಚ್ಚವನ್ನು ಭರಿಸುವುದು ರೈತರಿಗೆ ಹೊರೆಯಾಗುವುದಿಲ್ಲವೇ; ಆದಕಾರಣ ಈ ಕ್ರಮವನ್ನು ಕೈಬಿಡಲಾಗುವುದೇ;

ಈ) ಹಳೆಯ ಪಶು ಚಿಕಿತ್ಸಾಲಯಗಳ ಕಟ್ಟಡಗಳ ದುರಸ್ತಿಗಾಗಿ ಪ್ರತ್ಯೇಕ ನಿಧಿಯನ್ನು ಸ್ಥಾಪಿಸಲಾಗುವುದೇ?

ಶ್ರೀ ಎಂ. ಮಹದೇವ್ (ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರು)

ಅ) 600 ಪ್ರಾಥಮಿಕ ಪಶುಚಿಕಿತ್ಸಾ ಕೇಂದ್ರಗಳನ್ನು ಪಶುಚಿಕಿತ್ಸಾಲಯಗಳನ್ನಾಗಿ ಕಳೆದ ಮೂರು ವರ್ಷದಲ್ಲಿ ರಾಜ್ಯಾದ್ಯಂತ ಮೇಲ್ದರ್ಜೆಗೇರಿಸಲಾಗಿದೆ. 250 ಪಶುವೈದ್ಯಾಧಿಕಾರಿಗಳ ನೇಮಕಾತಿ ಪ್ರಕ್ರಿಯೆ ಪ್ರಗತಿಯಲ್ಲಿದೆ.

203 ಪಶುವೈದ್ಯಾಧಿಕಾರಿಗಳು ಮತ್ತು 311 ಪಶುವೈದ್ಯಕೀಯ ಸಹಾಯಕರುಗಳನ್ನು ಗುತ್ತಿಗೆ ಆಧಾರದ ಮೇಲೆ ನೇಮ ಮಾಡಿಕೊಳ್ಳಲಾಗಿದೆ.

ಆ) ಲಭ್ಯವಿರುವ ಸಿಬ್ಬಂದಿಯಿಂದ ಪಶುವೈದ್ಯಕೀಯ ಸೇವೆಗಳನ್ನು ಒದಗಿಸಲಾಗುತ್ತಿದೆ.

ಇ) ವಿಧಿಸಲಾಗಿದ್ದ ಸೇವಾಶುಲ್ಕವನ್ನು ಸರ್ಕಾರಿ ಆದೇಶ ಸಂಖ್ಯೆ: ಪಸಂಮಿ 57 ಪಪಾಯೋ 2003 ದಿನಾಂಕ: 21.07.2003ರಲ್ಲಿ ಹಿಂಬಕ್ಕೆ ಪಡೆಯಲಾಗಿದೆ.

ಈ) ಸದ್ಯಕ್ಕೆ ಇಲ್ಲ.

ಶ್ರೀ ಎಸ್.ಹೆಚ್. ಶಿವಶಂಕರ ರೆಡ್ಡಿ : ಮಾನ್ಯ ಅಧ್ಯಕ್ಷರೆ, ಸುಮಾರು 600 ಕ್ಕೂ ಮೇಲ್ಪಟ್ಟು ಪಶು ವೈದ್ಯಾಧಿಕಾರಿಗಳ ನೇಮಕಾತಿಯ ಪ್ರಕ್ರಿಯೆ ಈಗಾಗಲೇ ಚಾಲೂ ಮಾಡಿದ್ದೇವೆಂದು ಹೇಳುತ್ತಿದ್ದಾರೆ. ಇದು ಬಹಳಷ್ಟು ಪಶು ವೈದ್ಯ ಶಾಲೆಗಳಲ್ಲಿ ಈ ವೈದ್ಯಾಧಿಕಾರಿಗಳಿಲ್ಲದೆ ತೊಂದರೆಯಾಗಿದೆ. ಈ ಪ್ರಕ್ರಿಯೆಯನ್ನು ಬೇಗ ಮುಗಿಸಿ ನೇಮಕಾತಿ ಆಗಬೇಕೆಂದು ಆಗ್ರಹ ಮಾಡುತ್ತಾ, ಅನೇಕ ಪಶು ವೈದ್ಯಕೀಯ ಕಟ್ಟಡಗಳು ಬಹಳ ಶಿಥಿಲವಾಗಿವೆ. ಯಾವುದೇ ಯೋಜನೆಯಡಿಯಲ್ಲಿ ಅವುಗಳ ರಿಪೇರಿ ಕೂಡ ಆಗುತ್ತಿಲ್ಲ. ಆದ್ದರಿಂದ ನಾನು ಮಾನ್ಯ ಮಂತ್ರಿಗಳಲ್ಲಿ ಮನವಿ ಮಾಡಿಕೊಳ್ಳುವುದೇನೆಂದರೆ, ಯಾವುದಾದರೊಂದು ಶೀರ್ಷಿಕೆಯಡಿಯಲ್ಲಿ ಹಳೇ ಕಟ್ಟಡಗಳನ್ನು ರಿಪೇರಿ ಮಾಡುವುದಕ್ಕೆ ಕ್ರಮ ತೆಗೆದುಕೊಳ್ಳಬೇಕೆಂದು ಹೇಳಿ ತಮ್ಮ ಮೂಲಕ ಒತ್ತಾಯಿಸುತ್ತೇನೆ.

ಶ್ರೀ ಎಂ. ಮಹದೇವ್ : ಮಾನ್ಯ ಅಧ್ಯಕ್ಷರೆ ಈಗಾಗಲೇ ನಾನು ತಿಳಿಸಿದ ಹಾಗೆ, 250 ಪಶು ವೈದ್ಯರುಗಳನ್ನು ಶೀಘ್ರದಲ್ಲಿ ನೇಮಿಸಲು ಸರ್ಕಾರ ಕ್ರಮ ತೆಗೆದುಕೊಂಡಿದೆ. ರಾಜ್ಯದಲ್ಲಿ ಒಟ್ಟು 16,428 ಹುದ್ದೆಗಳಿವೆ. ಭರ್ತಿಯಾಗಿರುವುದು 11,820, 4548 ಖಾಲಿ ಹುದ್ದೆಗಳಿವೆ. ಇದನ್ನು ಭರ್ತಿ ಮಾಡಲು ಸಂಸ್ಥೆಗಳು ಜಾಸ್ತಿ ಇದ್ದು, ಡಾಕ್ಟರುಗಳು ಕಡಿಮೆ ಇರುವುದರಿಂದ ಅದಕ್ಕೋಸ್ಕರ ಹಂತ ಹಂತವಾಗಿ ಮೇಲ್ದರ್ಜೆಗೇರಿಸುವುದು ಮತ್ತು 250 ಡಾಕ್ಟರುಗಳನ್ನು ನೇಮಿಸುವ ಕ್ರಮವನ್ನು ನಾವು ಕೈಗೊಂಡಿದ್ದೇವೆ.

ಶ್ರೀ ಬಿ.ಎನ್. ಬಚ್ಚೇಗೌಡ : ಈ ಇಲಾಖೆಯಲ್ಲಿ ಸುಮಾರು 3ನೇ ಒಂದು ಭಾಗದಷ್ಟು ಹುದ್ದೆಗಳು ಖಾಲಿ ಇವೆ. ಸುಮಾರು 60-70 ಅಸಿಸ್ಟೆಂಟ್ ಡೈರೆಕ್ಟರ್ಸ್ ಹುದ್ದೆಗಳು ಪ್ರಮೋಷನ್ಸ್ ಕೊಡದೇ ಖಾಲಿ ಇವೆ. ವೆಟರ್‌ನರಿ ಗ್ರಾಜ್ಯುಯೇಟ್ಸ್ ಬಹಳಷ್ಟಿದ್ದು, ಅವರನ್ನು ತುಂಬುವ ಕಾರ್ಯ ಮಾಡಿಲ್ಲ. ತಾವು ಹೇಳಿದ ಹಾಗೆ 500-600 ವೆಟರ್‌ನರಿ ಆಫೀಸರ್ಸ್ ಹುದ್ದೆ ಖಾಲಿ ಇವೆ. ವೆಟರ್‌ನರಿ

ಅಸಿಸ್ಟೆಂಟ್ಸ್ ಮತ್ತು ಕಾಂಪೌಂಡರ್, ಇತರೆ ಸ್ಟಾಫ್ ತಾವು ಹೇಳಿದ ಹಾಗೆ, ಸುಮಾರು 16 ಸಾವಿರ ಹುದ್ದೆಗಳಲ್ಲಿ 5 ಸಾವಿರ ಹುದ್ದೆ ಇಲ್ಲವೆಂದರೆ ಆಸ್ಪತ್ರೆಗಳನ್ನು ಹೇಗೆ ನಡೆಸುವುದು? ಕಳೆದ ಬಾರಿ ಕೇಳಿದಾಗಲೂ ಇದೇ ಹೇಳಿದಿರಿ. ನಾವು ರಿಕ್ರೂಟ್‌ಮೆಂಟ್ ಮಾಡುತ್ತೇವೆ, ಪ್ರಮೋಷನ್ಸ್ ಕೊಡುತ್ತೇವೆ ಎಂದು ಹೇಳಿದಿರಿ. ಆಸ್ಪತ್ರೆಗಳನ್ನು ಜಾಸ್ತಿ ಕೊಡುವುದು, ಅಲ್ಲಿ ಸ್ಟಾಫ್ ಇರುವುದಿಲ್ಲ. ಹಾಗೆ ತಮ್ಮ ಇಲಾಖೆಯಲ್ಲಿ ಒಟ್ಟಾರೆ 5 ಸಾವಿರ ಹುದ್ದೆಗಳು ಖಾಲಿ ಇದ್ದರೆ, ಅಲ್ಲಿ ಹಳ್ಳಿಯಲ್ಲಿ ಔಷಧಿ ಇಲ್ಲ, ಡಾಕ್ಟರ್ಸ್ ಇಲ್ಲ. ಆಸ್ಪತ್ರೆ ಇದೆ ಎಂದು ನಾವು ಶಾಸಕರು ಸಂತೋಷ ಪಡಬೇಕು. ನಮ್ಮಲ್ಲೊಂದು ಪೇಟರ್‌ನರಿ ಆಸ್ಪತ್ರೆ ಇದೆ ಸಂತೋಷಪಡಬೇಕು. ಅನೇಕ ಆಸ್ಪತ್ರೆಗಳಲ್ಲಿ ಯಾವುದೇ ಸ್ಟಾಫ್ ಇಲ್ಲ. ಏನು ಕಷ್ಟವಿದೆ ಎಂಬುದು ನಮಗೆ ಗೊತ್ತಿಲ್ಲ. ಆದಷ್ಟು ಬೇಗ ತುಂಬುವ ಕಾರ್ಯ ಮಾಡಬೇಕು.

ಶ್ರೀ ಎಂ. ಮಹದೇವ್ : ಯಾವ ಆಸ್ಪತ್ರೆಗಳಲ್ಲಿ ಮೆಡಿಸಿನ್ಸ್ ಇಲ್ಲವೆಂದು ಹೇಳುವ ಹಾಗಿಲ್ಲ. ಎಲ್ಲಾ ಆಸ್ಪತ್ರೆಗಳಲ್ಲೂ ಸಾಕಷ್ಟು ಮೆಡಿಸಿನ್‌ಗಳನ್ನು ಕೊಟ್ಟಿದ್ದೇವೆ. ಸಾಧ್ಯವಾದಷ್ಟು ಡಾಕ್ಟರುಗಳನ್ನು ನೇಮಿಸಿದ್ದೇವೆ. ಪಕ್ಕದ ಆಸ್ಪತ್ರೆಗಳಲ್ಲಿ ಯಾರು ವೈದ್ಯರಿಲ್ಲವೋ ಅಂಥ ಕಡೆ ನಾವು ಮೊಬೈಲ್ ಯೂನಿಟ್‌ಗಳನ್ನು ವ್ಯವಸ್ಥೆ ಮಾಡಿದ್ದೇವೆ. ಆರ್ಥಿಕ ಇಲಾಖೆಯ ಅನುಮತಿಯೂ ಇದಕ್ಕೆ ಬೇಕಾಗುತ್ತದೆ. ಮಿತವ್ಯಯವನ್ನೂ ನಾವು ಅನುಸರಿಸುತ್ತಿರುವುದರಿಂದ ಹಂತ ಹಂತವಾಗಿ ನೇಮಕವನ್ನು ಮಾಡುವುದಕ್ಕೆ ಸರ್ಕಾರ ಪ್ರಯತ್ನಿಸುತ್ತದೆ.

ಉಡುಪಿ ಜಿಲ್ಲೆಯಲ್ಲಿ ಹಿಂದುಳಿದ ವರ್ಗ ಮತ್ತು ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದಿಂದ ಸಾಲ ಮತ್ತು ಸಹಾಯಧನ

547 (4778) : ಶ್ರೀ ಗೋಪಾಲ ಬಂಡಾರಿ (ಕಾರ್ಕಳ) ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದಿಂದ ಸಾಲ ಮತ್ತು ಸಹಾಯಧನಗಳನ್ನು ಮಂಜೂರು ಮಾಡುವ ಅಧಿಕಾರಯಾರಿಗಿದೆ; ವಿವರ ಒದಗಿಸುವುದು.

ಆ) ಉಡುಪಿ ಜಿಲ್ಲೆಯಲ್ಲಿ ಕಳೆದ ಮೂರು ವರ್ಷಗಳಲ್ಲಿ ಎಷ್ಟು ಜನರಿಗೆ ಯಾವ ಯಾವ ಉದ್ದೇಶಕ್ಕೆ ಸಾಲ ಮತ್ತು ಸಹಾಯಧನ ವಿತರಿಸಲಾಗಿದೆ, ತಾಲ್ಲೂಕು ಹೆಸರುಗಳೊಂದಿಗೆ ವಿವರ ನೀಡುವುದು?

ಇ) ಉಡುಪಿ ಜಿಲ್ಲೆಯಲ್ಲಿ ಎಷ್ಟು ಅರ್ಜಿಗಳು ಮಂಜೂರಾತಿಗಾಗಿ ಬಾಕಿ ಇವೆ; ಸಾಲ ಸಹಾಯಧನ ಎಷ್ಟು ಸಮಯದಲ್ಲಿ ಮಂಜೂರಾಗುತ್ತದೆ?

ಶ್ರೀ ಎ. ಕೃಷ್ಣಪ್ಪ (ಸಮಾಜ ಕಲ್ಯಾಣ ಸಚಿವರು)

ಅ) ಸಾಲ ಪಡೆಯಲು ಇಚ್ಛಿಸುವ ಅರ್ಜಿದಾರರು ಅರ್ಜಿಗಳನ್ನು ಜಿಲ್ಲಾ ಪಂಚಾಯತ್‌ನ ಮುಖ್ಯಕಾರ್ಯನಿರ್ವಹಣಾಧಿಕಾರಿಯವರ ಅಧ್ಯಕ್ಷತೆಯಲ್ಲಿರುವ ಜಿಲ್ಲಾ ಸಮಿತಿಗೆ ಸಲ್ಲಿಸಬೇಕಾಗುತ್ತದೆ. ಸಮಿತಿಯು ಅರ್ಜಿಯನ್ನು ಅರ್ಜಿದಾರರ ಸೇವಾ ವಲಯದಲ್ಲಿ ಬರುವ ಬ್ಯಾಂಕ್ ಶಾಖೆಗೆ ಶಿಪಾರಸ್ಸು ಮಾಡಿದ ಅರ್ಜಿದಾರರ ಯೋಜನೆಗಳು ಆರ್ಥಿಕ ಸಮಂಜಸತೆ ಹಾಗೂ ಲಾಭದಾಯಕತೆಯನ್ನು ಪರಿಶೀಲಿಸಿ ಸಾಲ ಮಂಜೂರಾತಿಗೆ ಒಪ್ಪಿಗೆ ಸೂಚಿಸಿ ಜಿಲ್ಲಾ ಸಮಿತಿಯ ಅನುಮೋದನೆಗಾಗಿ